**ಸಾಕ್ಷಿಯನ್ನು ದಿಃ 29.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಡಿ.ಕೆ.ಆರ್ ವಕೀಲರಿಂದಃ-**

1975 ನೇ ಸಾಲಿನಲ್ಲಿ ನಮ್ಮ ತಂದೆ ನರಸಿಂಹ ಶೆಟ್ಟಿರವರಿಗೆ ಯಾವ ದಾಖಲೆ, ಯಾವ ಎಂ.ಆರ್ ನಂಬರ್ ಮೇಲೆ ಖಾತೆ ಆಧಾರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಭೋಗ್ಯ ಪತ್ರದ ಅಧಾರದ ಮೇಲೆ ಆಗಿರುತ್ತದೆ ಎನ್ನುತ್ತಾರೆ. ಭೋಗ್ಯ ಪತ್ರದ ಮೂಲಕ ಖಾತೆದಾರರು ಆಗುವುದಿಲ್ಲ, ಕ್ರಯ ಪತ್ರ ಆಗಬೇಕು ಎಂಬ ವಿಚಾರ ನನಗೆ ಗೊತ್ತು. 1975 ಖಾತೆ ಆಗುವ ಸಮಯದಲ್ಲಿ ಯಾವ ದಾಖಲೆಗಳನ್ನು ಕೊಡಲಾಗಿತ್ತು ಎಂದು ನನಗೆ ಗೊತ್ತಿಲ್ಲ, ಅದು ನನ್ನ ತಂದೆಗೆ ಗೊತ್ತು, ನಾನು ಆ ಸಮಯದಲ್ಲಿ ಹುಟ್ಟಿರಲಿಲ್ಲ ಎನ್ನುತ್ತಾರೆ. ಆರ್.ಟಿ.ಸಿ ಲಂ 9 ರಲ್ಲಿ ನನ್ನ ತಂದೆ ಹೆಸರಾಗಲಿ ನನ್ನ ಹೆಸರಾಗಲಿ ಬರಲು ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಿಪಿ. 31 ರಲ್ಲಿ ಎ.ಸಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದಾಗ ನಾನು ಸಹಿ ಮಾಡಿದ್ದೆ. ಸ್ವತ್ತಿನ ಹಕ್ಕು ಇಂತಹದ್ದೆ ಪತ್ರ ಮೂಲಕ ಬಂದಿತ್ತು ಎಂದು ತೋರಿಸಲು ಯಾವುದೆ ತೊಂದರೆ ಇರಲಿಲ್ಲ. ಸಾಮಾನ್ಯವಾಗಿ ಭೋಗ್ಯ ಪತ್ರ ಮಾಡಿಕೊಂಡಂತಹ ವ್ಯಕ್ತಿಗೆ ಮಾಲೀಕತ್ವ ಕೊಟ್ಟಿರುವುದಿಲ್ಲ ಸ್ವಾಧೀನ ಮಾತ್ರ ಕೊಡಲಾಗುತ್ತದೆ ಎಂದರೆ ಸರಿ. ಭೋಗ್ಯ ಪತ್ರ ಮಾಡಿಕೊಂಡಂತಹ ವ್ಯಕ್ತಿಯ ಹೆಸರಿನಲ್ಲಿ ಕಂದಾಯ ದಾಖಲೆಗಳು ಇರಬೇಕಾಗುತ್ತದೆ ಎಂದರೆ ಸರಿ. 1975 ರಲ್ಲಿ ಪೂಜಾರಿ ಜವರನಾಯಕ ರವರ ಹೆಸರಿಗೆ ಕಂದಾಯ ದಾಖಲೆಗಳು ಇದ್ದವಾ ಎಂದು ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿ ಆ ಸಮಯದಲ್ಲಿ ಅವರ ತಂದೆ ಕುಣಿಯನ ಜವರನಾಯಕ ರವರ ಹೆಸರಿನಲ್ಲಿ ದಾಖಲೆಗಳು ಇದ್ದವು. ಪೂಜಾರಿ ಜವರನಾಯಕ ರವರ ಹೆಸರಿನಲ್ಲಿ ಆ ಸಮಯದಲ್ಲಿ ಕಂದಾಯ ದಾಖಲೆಗಳು ಇಲ್ಲದ ಕಾರಣ ಭೋಗ್ಯ ಮಾಡುವ ಯಾವುದೆ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ಅವರು ಮೈನರ್ ಆದ ಕಾರಣ ಅವರ ತಂದೆ ಹೆಸರಿನಲ್ಲಿ ಇದ್ದವು ಎನ್ನುತ್ತಾರೆ. ಪೂಜಾರಿ ಜವರನಾಯಕ ಹೆಸರಿನಲ್ಲಿ ಕಂದಾಯ ದಾಖಲೆ ಇಲ್ಲದ ಕಾರಣ ಖಾತಾ ಕೂಡ ನರಸಿಂಹಶೆಟ್ಟಿರವರ ಹೆಸರಿಗೆ ಬರುವುದಿಲ್ಲ

ಎಂದರೆ ತಂದೆಯವರ ಸ್ವತ್ತನ್ನು ಮಕ್ಕಳು ಮಾಡಬಹುದು ಎಂದು ನುಡಿಯುತ್ತಾರೆ. ಆರ್.ಟಿ.ಸಿಯಲ್ಲಿ ತಂದೆ ಹೆಸರು ನಮೂದು ಇದ್ದ ಕಾರಣ ಅವರು ಮರಣ ಹೊಂದಿದ ನಂತರ ನನ್ನ ಹೆಸರನ್ನು ನಮೂದು ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ತಂದೆಯವರಿಗೆ ಯಾವುದೆ ಹಕ್ಕಿಲ್ಲದ ಕಾರಣ ನಮ್ಮ ಹೆಸರಿಗೆ ಖಾತೆ ಆಗಿರುವುದು ಸರಿಯಲ್ಲ ಎಂದರೆ ಸುಳ್ಳು ಎಂದು ನುಡಿಯುತ್ತಾರೆ.

2013-14 ನೇ ಸಾಲಿನ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ತಕರಾರನ್ನು ಸಲ್ಲಿಸುವ ಕಾಲಕ್ಕೆ ಸ್ವತ್ತು ನನ್ನ ಸ್ವಾಧೀನದಲ್ಲಿ ಇದೆ ವಾದಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ದಾವೆ ಹಾಕಲು ಯಾವುದೆ ತೊಂದರೆ ಇರಲಿಲ್ಲ. 1 ನೇ ಪ್ರತಿವಾದಿ ರವರ ಜೀವಿತಾವಧಿಯಲ್ಲಿ ಕುಡಿತದ ಚಟಕ್ಕೆ ಬಲಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ನನ್ನ ತಂದೆ ಸ್ನೇಹಿತರಾಗಿದ್ದರು ಎಂದರೆ ಗೊತ್ತಿಲ್ಲ. ನಿಪಿ. 22 ಮತ್ತು 23 ರ ಪ್ರಕಾರ ನಾನು ಸ್ವತ್ತನ್ನು 1970 ರಿಂದ 2020 ನೇ ಸಾಲಿನ ವರೆಗೂ ಯಾವುದೆ ಕ್ರಯ ಪತ್ರ ಮೂಲಕ ಸ್ವಾಧೀನ ತೆಗೆದುಕೊಳ್ಳದ ಕಾರಣ ನಾವು ಸ್ವತ್ತಿನ ಹಕ್ಕುದಾರರಲ್ಲ ಎಂದರೆ ಸರಿಯಲ್ಲ. ಭೋಗ್ಯದ ಸ್ವತ್ತು ಬಿಡುಗಡೆ ಆಗಿಲ್ಲ, ನನ್ನ ಸ್ವಾಧೀನದಲ್ಲೆ ಇದೆ ಎಂದು ಮಾಲೀಕತ್ವ ಕೋರಿ ದಾವೆ ಹಾಕಿರುತ್ತೇನೆ. ಸದರಿ ದಾವಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೆ ತೊಂದರೆ ಇಲ್ಲ. ನಾನು ಸ್ವಾಧೀನದಲ್ಲಿ ಇಲ್ಲದ ಕಾರಣ ಅಂತಹ ದಾವೆ ಹಾಕಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ. 32 ರಲ್ಲಿ ಸ್ವತ್ತಿನ ಸ್ವಲ್ಪ ಭಾಗವನ್ನು ಗೋವಿಂದನಾಯಕ ಬಿನ್ ಸ್ವಾಮಿನಾಯಕ ರವರು ಕ್ರಯ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಮಾರಾಟ ಮಾಡಿದ ವ್ಯಕ್ತಿ ಯಾರೆಂದು ನಾನು ತಿಳಿದುಕೊಂಡಿಲ್ಲ, ನನ್ನ ತಂದೆಗೆ ಗೊತ್ತಿತ್ತು. 2012 ರಲ್ಲಿ ತಂದೆ ತೀರಿಕೊಂಡಿದ್ದು, 2013 ರ ನಂತರ ನಾನು ಸ್ವತ್ತಿನ ವ್ಯವಹಾರ ನೋಡಿಕೊಳ್ಳುತ್ತಿದ್ದೇನೆ. ಸ್ವತ್ತಿಗೆ ಸಂಬಂಧಿಸಿದ ಮಾಹಿತಿ ನನಗೆ 2012-13 ರ ಈಚೆಗೆ ಗೊತ್ತಾಗಿರುತ್ತದೆ ಅದಕ್ಕೂ ಮೊದಲು ನನ್ನ ತಂದೆಗೆ ಗೊತ್ತಿತ್ತು. 2012 ರ ಕ್ಕೂ ಪೂರ್ವದಲ್ಲಿ ಸ್ವತ್ತಿನ ಭೋಗ್ಯದ ಹಣವನ್ನು ನನ್ನ ತಂದೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ 2 ಎಕರೆ ಸ್ವತ್ತಿಗೂ ನಮಗೂ ಯಾವುದೆ ಸಂಬಂಧ ಇಲ್ಲ, ಮಾಲೀಕತ್ವ ಇಲ್ಲ ಎಂದರೆ ಸರಿಯಲ್ಲ. ಆರ್.ಟಿ.ಸಿಯಲ್ಲಿ ಅಕ್ರಮವಾಗಿ ನಮ್ಮ ಹೆಸರು ಇದೆ

ಎಂಬ ಒಂದೆ ಕಾರಣ ವಾದಿಗಳು ವಿಭಾಗ ಮಾಡಿಕೊಳ್ಳಲು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಅದೆ ಕಾರಣಕ್ಕಾಗಿ ನಾನು ಸ್ವತ್ತಿನ ಸಂಬಂಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.